# ಹೆದ್ದಾರಿ ಬದಿಯಲ್ಲಿ ಜೇನುತೊಟ್ಟಿಲು

■ ರಾಮಕೃಷ್ಣ ಸಿದ್ರಪಾಲ

ವಸಂತ ಋತುವಿನ ಆಗಮನದ ಹಿನ್ನೆಲೆಯಲ್ಲಿ ಎಲ್ಲೆಲ್ಲೂ ಚೈತ್ರದ ಸಂಭ್ರಮ... ನಿಸರ್ಗದಲ್ಲಿ ಹರ್ಷೋಲ್ಲಾಸದ ಸಮಯ. ಎತ್ತ ನೋಡಿದರೂ ಹಸಿರು, ಚಿಗುರು, ಮಾವಿನ ಚಿಗುರು, ಮಿಡಿ ಮಾವಿನಕಾಯಿ, ಹೊಂಗೆಹೂಗಳು, ದುಂಬಿ ಜೇನ್ನೊಣಗಳ ಝೇಂಕಾರದ ಮರ್ಮರನಾದ...

ಉತ್ತರ ಕನ್ನಡದ ರಾಷ್ಟ್ರೀಯ ಹೆದ್ದಾರಿ–63ರ ಹುಬ್ಬಳ್ಳಿ–ಅಂಕೋಲಾ ಮಾರ್ಗದಲ್ಲಿ ಕಲಘಟಗಿ ದಾಟಿದ ಬಳಿಕ ರಮಣೀಯ ಕಾನನ ಶುರುವಾಗುತ್ತದೆ. ಈಗ ಆ ದಾರಿಯಲ್ಲಿ ಪ್ರಯಾಣ ಮಾಡಿದರೆ, ಕಾಡನ್ನು ಸೀಳಿಕೊಂಡು ಸಾಗುವ ಹೆದ್ದಾರಿಯ ಇಕ್ಕೆಲಗಳಲ್ಲಿ ಹೂದುಂಬಿದ ಮರಗಳು ತಲೆದೂಗುವುದನ್ನು ನೋಡಬಹುದು. ಖುಷಿಯಿಂದ ಹಾಡೊಂದನ್ನು ಗುನುಗುತ್ತ ತಿರುವೊಂದನ್ನು ದಾಟಿಕೊಂಡು, ಎದುರುಗಡೆಯಿಂದ ಭರ್ರನೇ ಸಾಗುವ ವಾಹನಗಳತ್ತಲೂ ಲಕ್ಷ್ಯಕೊಡುತ್ತ ವಸಂತ ಮಾಸವೆಂಬ ಕುಂಚದಿಂದ ಆಗಷ್ಟೇ ಅದ್ದಿ ತೆಗೆದ ಕ್ಯಾನ್ವಾಸ್ ಮೇಲಿನ ತಾಜಾ ಜಲವರ್ಣಚಿತ್ರದಂತೆ ತೋರುತ್ತಿದ್ದ ನಿಸರ್ಗದ ಸೊಬಗನ್ನು ಕಣ್ತುಂಬಿಕೊಳ್ಳಬಹುದು. ಹಳದಿ ಹೂಗೊಂಚಲಿನ ಮರದ ಚೆಲುವಿಗೆ ಮನಸೋತು ನಿಲ್ಲಬಹುದು.

ಪ್ರಕೃತಿಯ ಚೆಲುವನ್ನು ಆಸ್ವಾದಿಸುತ್ತ ನಿಂತವನಿಗೆ, ಹೆದ್ದಾರಿ ಬದಿಯ ದರ್ಗಾವೊಂದರ ಮೇಲಿದ್ದ ಮರದಲ್ಲಿ ದಪ್ಪ ದಪ್ಪ ಕಂದು ಗೊಂಚಲು, ವಿರಳವಾದ ಎಲೆಗಳು... ಏನನ್ನೋ ಹೇಳುತ್ತಿವೆ ಅನ್ನಿಸಿತು. ಕಣ್ಣು ಚೂಪು ಮಾಡಿಕೊಂಡು ಮತ್ತೊಮ್ಮೆ ದಿಟ್ಟಿಸಿದೆ. ಅರೆರೆ ಜೇನುಗೂಡು... ಒಂದಲ್ಲ ಎರಡಲ್ಲ, ವಿಶಾಲವಾಗಿ ಹರಡಿಕೊಂಡಿದ್ದ ಆ ಹಳೆಯ ಮರದ ಮೈ ತುಂಬ 25ರಿಂದ 30ರಷ್ಟು ಜೇನುಗೂಡುಗಳು. ಹೆದ್ದಾರಿ ಬದಿಯ ಮರದಲ್ಲಿ ರೆಂಬೆಕೊಂಬೆಗಳನ್ನು ಆಶ್ರಯಿಸಿ ಗೂಡು ಕಟ್ಟಿದ್ದವು.

ಹತ್ತಾರು ಫೋಟೊಗಳನ್ನು ತೆಗೆದ ಮೇಲೆ ಅಲ್ಲಿಯೇ ಇದ್ದ ಗೂಡಂಗಡಿಯಲ್ಲಿ ವಿಚಾರಿಸಿದೆ. ಸಾಧಾರಣವಾಗಿ ಪ್ರತಿ ವರ್ಷ ಚೈತ್ರ ಮಾಸದ ಕಾಲದಲ್ಲಿ ಜೇನುಗಳ ಹಿಂಡು ಬಂದು ಈ ಮರದ ರೆಂಬೆಕೊಂಬೆಗಳಲ್ಲಿ ಆಶ್ರಯ ಪಡೆಯುತ್ತವೆ. ಪ್ರತಿ ವರ್ಷ ಇಷ್ಟೊಂದು ಜೇನುಗಳ ಹಿಂಡು ಬರುತ್ತಿರಲಿಲ್ಲ. ಈ ವರ್ಷ ಜಾಸ್ತಿ ಎಂದು ಅಂಗಡಿಯಾತ ಹೇಳಿದ.





ಪಶ್ಚಿಮ ಘಟ್ಟವನ್ನು ಸೀಳಿಕೊಂಡು ಹಾದು ಹೋದ ಹುಬ್ಬಳ್ಳಿ–ಅಂಕೋಲಾ ನಡುವಣ ರಾಷ್ಟ್ರೀಯ ಹೆದ್ದಾರಿ–63... ಕಲಘಟಗಿ ಸಮೀಪ ರಸ್ತೆಯ ಬದಿಯಲ್ಲಿರುವ ಸಾತೋ ಶಹೀದ್ ದರ್ಗಾ